ಅ) ಈ ರಸ್ತೆಗೆ ಡಾಂಬರೀಕರಣ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ?

ಇ) ಹಾಗಿದ್ದಲ್ಲಿ, ಯಾವಾಗ ಮಾಡಲಾಗುವುದು ಮತ್ತು ಅದಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಕೆ.ಜಿ.ಎಫ್ ಹಾಗೂ ರಾಮಕುಪ್ಪಂನ ಮಧ್ಯೆ ರಸ್ತೆಯ ಉದ್ದ 26 ಕಿ.ಮೀ (ಕರ್ನಾಟಕದಲ್ಲಿ 24 ಕಿ.ಮೀ ಹಾಗೂ ಆಂಧ್ರ ಪ್ರದೇಶದಲ್ಲಿ 2 ಕಿ.ಮೀ.)

ಅ) ರಾಜ್ಯದಲ್ಲಿ ಬರುವ ಈ ರಸ್ತೆಯ 24 ಕಿ.ಮೀ. ಉದ್ದದಲ್ಲಿ 18.80 ಕಿ.ಮೀ ಉದ್ದಕ್ಕೆ ಡಾಂಬರು ಮೇಲ್ಪೈ ಇರುತ್ತದೆ. ಮಿಕ್ಕ 5.20 ಕಿ.ಮೀ. ಉದ್ದವು ಜಲ್ಲಿ ಮೇಲ್ಪೈ ಹೊಂದಿದ್ದು, ಈ ಸಾಲಿನಲ್ಲಿ ಡಾಂಬರು ಮಾಡುವ ಪ್ರಸ್ತಾಪವಿದೆ.

ಇ) ಬಾಕಿ ಇರುವ 5.20 ಕಿ.ಮಿ. ಉದ್ದದ ಜಲ್ಲಿ ರಸ್ತೆಯ ಪೈಕಿ 2.30 ಕಿ.ಮೀ. ಉದ್ದಕ್ಕೆ 2.84 ಲಕ್ಷ ರೂ.ಗಳ ಅಂದಾಜಿನಲ್ಲಿ ಡಾಂಬರನ್ನು ಈ ಸಾಲಿನಲ್ಲಿ ಮಾಡಲಾಗುವುದು. ಉಳಿದ 2.90 ಕಿ.ಮೀ. ಉದ್ದದ ರಸ್ತೆಗೆ ಡಾಂಬರು ಮಾಡಲು 4.0 ಲಕ್ಷ ರೂ.ಗಳನ್ನು ಗಡಿಪ್ರದೇಶ ಅಭಿವೃದ್ಧಿ ಯೋಜನೆಯಡಿ ಅನುದಾನವನ್ನು ಕೋರಲಾಗಿದ್ದು ಈ ಸಾಲಿನಲ್ಲಿಯೇ ತೆಗೆದುಕೊಳ್ಳುವ ಉದ್ದೇಶವಿದೆ.

ಇಂಜಿನಿಯರ್‌ಗಳ ಹೊಣೆಗಾರಿಕೆ

2279 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಲೋಕೋಪಯೋಗಿ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಕಟ್ಟಡಗಳನ್ನು ಕಟ್ಟಿದ ಮೇಲೆ ನಿರ್ದಿಷ್ಟ ಅವಧಿಯೊಳಗೆ ಏನಾದರೂ ತಾಂತ್ರಿಕ ದೋಷದಿಂದ ಅಪಾಯ ಆದಲ್ಲಿ ಸಂಬಂಧಿಸಿದ ಎಂಜಿನಿಯರ್ ಮತ್ತು ಕಂಟ್ರಾಕ್ಟರರನ್ನು ನಷ್ಟಕ್ಕೆ ಹೊಣೆಗಾರರನ್ನಾಗಿ ಮಾಡುವ ವಿಚಾರ ಸರ್ಕಾರದ ಮುಂದಿದೆಯೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು)

ಅ) ಪ್ರಸ್ತುತ ಈಗಿರುವ ಕಾನೂನಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಅವಕಾಶವಿರುವುದರಿಂದ ಈ ಪ್ರಶ್ನೆ ಮತ್ತೆ ಸರ್ಕಾರದ ಮುಂದಿಲ್ಲ.

ಕುಕ್ಕುಂಡ ಮಂಡಲ ಪಂಚಾಯ್ತಿಯಲ್ಲಿ ನಡೆದ ಅವ್ಯವಹಾರಗಳು

2353 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಕುಕ್ಕುಂಡ ಮಂಡಲ ಪಂಚಾಯ್ತಿಯಲ್ಲಿ ರೂ.63,684.45 ಅವ್ಯವಹಾರವಾಗಿರುವುದನ್ನು ನನ್ನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 661ಕ್ಕೆ ಒಪ್ಪಿ ವಿಚಾರಣೆ ನಡೆಸಲಾಗುವುದೆಂದು ತಿಳಿಸಿದ್ದು, ಇಲ್ಲಿಯವರೆಗೆ ಕೈಗೊಂಡಿರುವ ಕ್ರಮಗಳೇನು?

ಆ) ಈ ಹಣ ವಸೂಲಿಯಾಗಿ ಸಂಬಂಧಪಟ್ಟ ಮಂಡಲಿ ಪಂಚಾಯತಿ ಕುಕ್ಕುಂಡ ಖಾತೆಗೆ ಜಮಾ ಮಾಡಲಾಗಿದೆಯೇ ಅಥವಾ ಇಲ್ಲವೇ?

ಇ) ಇಲ್ಲದಿದ್ದಲ್ಲಿ, ಈ ಅವ್ಯವಹಾರದಲ್ಲಿ ತೊಡಗಿದವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು?